ಕರ್ನಾಟಕ ಸರ್ಕಾರ

ಸಂ.ಡಿಟಿಇ 05 ಎಸ್‌ಸಿಹೆಚ್(1)2019-20 / 1965

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ: 05-08-2019.

**ಭಾರತ ಸರ್ಕಾರದ ಸೇವೆಯಲ್ಲಿ**

**ಅತಿ ಜರೂರು**

ಇವರಿಗೆ,

**ಪ್ರಾಂಶುಪಾಲರು,**
Adhichunchanagiri Institute of Technology.
P.B.No - 91, Jyothinagar Post,
CHIKKAMAGALUR – 577101.

Adichunchanagiri Institute of Technology
No. 403
Date 12-8-19
Chikmagalur-577102

ಮಾನ್ಯರೇ,

**ವಿಷಯ :** 2019-20ನೇ ಸಾಲಿಗೆ ವಿವಿಧ ವೃತ್ತಿಪರ ಕೋರ್ಸುಗಳಲ್ಲಿ 2ನೇ, 3ನೇ ಮತ್ತು 4ನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶುಲ್ಕ ಉಚಿತ (**ಪ್ರತಿಭಾ ಪುರಸ್ಕಾರ**) ನೀಡುವ ಬಗ್ಗೆ.

-0000000-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದ್ವಿತೀಯ ಪಿ.ಯು.ಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದು ಉತ್ತೀರ್ಣರಾಗಿ, ಬಡತನ ರೇಖೆಗಿಂತ ಕೆಳಮಟ್ಟದ ಕುಟುಂಬದಿಂದ ಬಂದಂತಹ(ಬಿ.ಪಿ.ಎಲ್ ಕಾರ್ಡ್ ಹೊಂದಿರುವ) ವಿದ್ಯಾರ್ಥಿಗಳು ಸಿ.ಇ.ಟಿ ಮುಖಾಂತರ ವಿವಿಧ ವೃತ್ತಿಪರ ಕೋರ್ಸುಗಳಾದ ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ, ಕೃಷಿ ವಿಜ್ಞಾನ, ಪಶು ವೈದ್ಯಕೀಯ ಹಾಗೂ ಆಯುರ್ವೇದಿಕ್ ಕಾಲೇಜುಗಳಲ್ಲಿ ವಿವಿಧ ಕೋರ್ಸುಗಳಿಗೆ ಪ್ರವೇಶಾತಿ ಪಡೆದವರಿಗೆ ಶುಲ್ಕ ಉಚಿತ (ಪ್ರತಿಭಾ ಪುರಸ್ಕಾರ) ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಅದರಂತೆ ಈ ಕೆಳಗೆ ನಮೂದಿಸಿರುವ ವಿದ್ಯಾರ್ಥಿಗಳಿಗೆ ಕಳೆದ ಸಾಲಿನಲ್ಲಿ ಶುಲ್ಕ ಉಚಿತ (ಪ್ರತಿಭಾ ಪುರಸ್ಕಾರ) ಯೋಜನೆಯಡಿ ಶುಲ್ಕವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಎನ್.ಇ.ಎಫ್.ಟಿ (N.E.F.T) ಮುಖಾಂತರ ಜಮೆ ಮಾಡಲಾಗಿರುತ್ತದೆ. ಸದರಿ ಯೋಜನೆಯಡಿ ಅರ್ಹರಾಗಿ, ಮಂಜೂರಾತಿ ನೀಡಿದ ವಿದ್ಯಾರ್ಥಿಗಳಿಗೆ ವ್ಯಾಸಂಗ ಪೂರ್ಣಗೊಳ್ಳುವವರೆಗೆ ಶುಲ್ಕ ಉಚಿತ (ಪ್ರತಿಭಾ ಪುರಸ್ಕಾರ) ಯೋಜನೆಯನ್ನು ವಿಸ್ತರಿಸಬೇಕಾಗಿರುತ್ತದೆ.

ಅದ್ದರಿಂದ ಪ್ರಾಂಶುಪಾಲರು ತಮ್ಮ ಸಂಸ್ಥೆಯಲ್ಲಿ 2019-20ನೇ ಸಾಲಿನಲ್ಲಿ 2ನೇ, 3ನೇ ಮತ್ತು 4ನೇ ವರ್ಷಕ್ಕೆ ಅರ್ಹತೆ ಪಡೆದು, ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಬಗ್ಗೆ ಮಾಹಿತಿ, ಈ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಪಾಲಿಸಿರುವುದನ್ನು ಖಚಿತ ಪಡಿಸಿಕೊಂಡು ಕ್ರ.ಸಂ: 03, 04 & 05 ರಲ್ಲಿ ಸೂಚಿಸಿರುವ ಮಾಹಿತಿಯನ್ನು **ದಿನಾಂಕ: 15-09-2019ರ** ಒಳಗೆ ಈ ಕಛೇರಿಗೆ ಒದಗಿಸುವುದು.

1. ಪ್ರತಿಯೊಬ್ಬ ವಿದ್ಯಾರ್ಥಿಯು ಸರ್ಕಾರದ ಯಾವುದಾದರೂ ಒಂದು ಆರ್ಥಿಕ ಸೌಲಭ್ಯವನ್ನು ಮಾತ್ರ ಪಡೆಯಲು ಅರ್ಹತೆ ಪಡೆದಿರುತ್ತಾರೆ. ಅದರಂತೆ ವಿದ್ಯಾರ್ಥಿಗಳು **2019-20**ನೇ ಸಾಲಿನಲ್ಲಿ ಈ ಸೌಲಭ್ಯ ಪಡೆಯಲು ವಿವರಗಳು ಸಲ್ಲಿಸಿದಲ್ಲಿ, ಬೇರೆ ಯಾವುದೇ ವಿದ್ಯಾರ್ಥಿವೇತನಕ್ಕೆ ಅರ್ಹರಿರುವುದಿಲ್ಲ. ಒಂದು ಯೋಜನೆಯ ಸೌಲಭ್ಯಕ್ಕೆ ಅರ್ಹತೆ ಪಡೆದು ಮತ್ತೊಂದು ಸೌಲಭ್ಯಕ್ಕೆ ಅರ್ಜಿಯನ್ನು ಸಲ್ಲಿಸದಂತೆ ಸಂಸ್ಥೆಯವರು ಗಮನ ಹರಿಸಬೇಕಾಗಿರುತ್ತದೆ.

2. ವಿದ್ಯಾರ್ಥಿಗಳು ಹಾಲಿ ವ್ಯಾಸಂಗ ಮಾಡುತ್ತಿರುವ ತರಗತಿಗಳಲ್ಲಿ ಉತ್ತೀರ್ಣರಾಗಿ ಮುಂದಿನ ತರಗತಿಗೆ ಅರ್ಹರಿರಬೇಕು. ಒಂದು ವೇಳೆ ಈ ವರ್ಷದಲ್ಲಿ ಅನರ್ಹರಾದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಈ ಸೌಲಭ್ಯವನ್ನು ವಿಸ್ತರಿಸಲು ಸಾಧ್ಯವಾಗುವುದಿಲ್ಲ.



A3

3. ವಿದ್ಯಾರ್ಥಿಗಳು ಹೊಂದಿರುವ ಇತ್ತೀಚಿನ ರಾಷ್ಟ್ರೀಕೃತ ಬ್ಯಾಂಕಿನ Savings Account No., I.F.S.C Code ಮತ್ತು ವ್ಯವಹಾರದ ಮಾಹಿತಿವುಳ ಬ್ಯಾಂಕ್ ಪಾಸ್ ಪುಸ್ತಕದ ನಕಲು ಪ್ರತಿಗಳು ಅಥವಾ ಬ್ಯಾಂಕ್ ವ್ಯವಹಾರದ ಪ್ರತಿ **(Nationalized Active Major Account/Bank Statement)**.

4. ವಿದ್ಯಾರ್ಥಿಗಳು ಹೊಂದಿರುವ ಮೊಬೈಲ್ ಸಂಖ್ಯೆ ಮತ್ತು ತಂದೆ/ತಾಯಿ/ಪೋಷಕರ ದೂರವಾಣಿ ಸಂಖ್ಯೆ.

5. ವಿದ್ಯಾರ್ಥಿಗಳ ಹೆಸರು ಈ ಕೆಳಗೆ ನಮೂದಿಸಿರುವ ತಃಖ್ತೆಯಲ್ಲಿ ತಿಳಿಸಿರುವಂತೆ ಭರ್ತಿ ಮಾಡಿ, ಸಲ್ಲಿಸುವ ಜೆರಾಕ್ಸ್ ದಾಖಲೆಗಳನ್ನು ಪತ್ರಾಂಕಿತ ಅಧಿಕಾರಿ (ಗೆಜೆಟೆಡ್ ಅಧಿಕಾರಿ) ಯವರಿಂದ ದೃಢೀಕರಿಸಿದ ಪ್ರತಿ.

6. 2018-19ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕೆಲ ಸಂಸ್ಥೆಗಳಿಗೆ ಶುಲ್ಕ ಉಚಿತ (ಪ್ರತಿಭಾ ಪುರಸ್ಕಾರ) ಅರ್ಹತೆ ಪಡೆದ ವಿದ್ಯಾರ್ಥಿಗಳ ವಿವರಗಳನ್ನು ಸಲ್ಲಿಸಲು ಪತ್ರ ಬರೆಯಲಾಗಿದ್ದರೂ ಸಹ ಇಲ್ಲಿಯವರೆವಿಗೂ ವಿವರಗಳು ಕಳುಹಿಸಿಕೊಟ್ಟಿರುವುದಿಲ್ಲ. ಅದ್ದರಿಂದ ತಃಖ್ತೆಯಲ್ಲಿ ತಿಳಿಸಿರುವಂತೆ ಶುಲ್ಕ ಉಚಿತ(ಪ್ರತಿಭಾ ಪುರಸ್ಕಾರ)ವನ್ನು 2018-19ನೇ ಸಾಲಿನಲ್ಲಿ ಪಡೆಯದೇ ಇರುವ ವಿದ್ಯಾರ್ಥಿಗಳ ಅರ್ಹತೆಯ ಬಗ್ಗೆ ತಿಳಿಸುವುದು.

**ಸಂಸ್ಥೆಯ ಪ್ರಾಂಶುಪಾಲರು ವಿದ್ಯಾರ್ಥಿಗಳ ವಿವರಗಳನ್ನು ಸಲ್ಲಿಸದೆ, ವಿದ್ಯಾರ್ಥಿಗಳು ಈ ಯೋಜನೆ ಸೌಲಭ್ಯ ವಂಚಿತರಾದಲ್ಲಿ ಪ್ರಾಂಶುಪಾಲರೇ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಿದೆ.**

| Sl. No. | Students Name/ Mobile No. | Course / Year | Aadhaar No. | Ration Card No. | Bank Name & Branch | Saving Account No. | I.F.S.C Code |
|---|---|---|---|---|---|---|---|
| 1. | AKASHK G | 2nd CE | - | - | - | - | - |
| 2. | DIVYASHREE K L | 4th ISE | - | - | - | - | - |
| 3. | GANESH K V | 4th CE | - | - | - | - | - |
| 4. | HARSHA K P | 2nd CS | - | - | - | - | - |
| 5. | MANJUNATHA C C | 2nd CE | - | - | - | - | - |
| 6. | MOHAMMED RUMAIN | 4th CE | - | - | - | - | - |
| 7. | POOJA H S | 3rd EC | - | - | - | - | - |
| 8. | RAKSHITH H D | 3rd CS | - | - | - | - | - |
| 9. | SANTHOSHA K L | 4th EC | - | - | - | - | - |
| 10. | SHRIVATHSA B V | 2nd CS | - | - | - | - | - |
| 11. | SOORYA B S | 3rd ME | - | - | - | - | - |
| 12. | THRIVENI H S | 3rd EE | - | - | - | - | - |

9448115 3406
944 928 3039

ತಮ್ಮ ವಿಶ್ವಾಸಿ

ಸಹಾಯಕ ನಿರ್ದೇಶಕರು(ಎಂಪಿಸಿ).